**ಇಂದು ದಿಃ04-09-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸಾಕ್ಷಿಗೆ 2, 3 ಮತ್ತು 5 ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರವನ್ನು ತೋರಿಸಲಾಗಿ, ಅದರಲ್ಲಿ ಬರೆದಿರುವುದನ್ನು ಓದಲು ಬರುವುದಿಲ್ಲ. ಅದನ್ನು ನನ್ನ ಪರವಾಗಿ ಬರೆಯಲು ಹೇಳಿರುವುದಿಲ್ಲ. ನಾನು ಮೊದಲಿನ ವಕೀಲರಿಗೆ ನನಗೆ ಆಸ್ತಿ ಬೇಕು ಎಂದು ಹೇಳಿದ್ದೆನು. ನನ್ನ ಮದುವೆಯ ಪೋಟೋಗಳನ್ನು ನಂದಿಗಾವಿ ಬಸವರಾಜಪ್ಪ ಎನ್ನುವವರು ತೆಗೆದಿದ್ದಾರೆ. ಅವರು ಪಿ.ಡಬ್ಲ್ಯೂ-4 ಎಂದು ನುಡಿದಿದ್ದಾರೆ. ನಂದಿಗಾವಿ ಬಸವರಾಜಪ್ಪ ಎನ್ನುವವರು ವಾದಿ ಮತ್ತು 1 ನೇ ಪ್ರತಿವಾದಿಗೆ ಪರಿಚಯಸ್ಥರಾಗಿರುವುದರಿಂದ ನಮ್ಮ ಮನೆಗೆ ಬಂದುಹೋಗಿ ಮಾಡುತ್ತಾರೆ. ನಂದಿಗಾವಿ ಬಸವರಾಜಪ್ಪ ಎನ್ನುವವರ ಅಂಗಡಿ ಬೈಪಾಸ್ ನಲ್ಲಿದ್ದು, ವಾದಿ ಮತ್ತು 1 ನೇ ಪ್ರತಿವಾದಿ ಅವರ ಅಂಗಡಿಗೆ ಎಲೆ ಪೆಂಡಿಗಳನ್ನು ಹೊಯ್ಯುತ್ತಿದ್ದರು. ನಿ.ಪಿ-36 ರಿಂದ 42 ಭಾವ ಚಿತ್ರಗಳನ್ನು ನಂದಿಗಾವಿ ಬಸವರಾಜಪ್ಪ ಎನ್ನುವವರು ತೆಗೆದಿದ್ದಾರೆ. ನಿ.ಪಿ-37 ಭಾವ ಚಿತ್ರದಲ್ಲಿ ಕಾಣಿಸುತ್ತಿರುವವರು 1 ನೇ ಪ್ರತಿವಾದಿಯ ಮಗ, ನಮ್ಮ ತಂದೆ ಮತ್ತು ಹಸು ಇರುತ್ತದೆಂದು ಉತ್ತರಿಸುತ್ತಾರೆ. ನಮ್ಮ ತಂದೆ ಮತ್ತು ಆತನ ಸಹೋದರರು, ಪಾಲು ವಿಭಾಗ ಮಾಡಿಕೊಂಡಿರುವುದು ನನಗೆ ಗೊತ್ತಿದೆ. ಗ್ರಾಮ ಪಂಚಾಯಿತಿಯಲ್ಲಿ ದಾಖಲೆ ಇಲ್ಲದೇ ಇರುವುದರಿಂದ, ಜನತಾ ಪ್ಲಾಟ್ ನ್ನು ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ. ಡಿ.ಡಬ್ಲ್ಯೂ-2 ರವರು ನಮ್ಮ ಊರಿನವರಾಗಿದ್ದು, ವಾದಿ ಮತ್ತು 1 ನೇ ಪ್ರತಿವಾದಿಗೆ ಪರಿಚಯಸ್ಥರಾಗಿದ್ದಾರೆ. ನಿ.ಡಿ-2 ಪಾಲು ಪಟ್ಟಿಯಲ್ಲಿ ತೋರಿಸಿದ 4 ನೇ ಆಸ್ತಿಯನ್ನು ನಮ್ಮ ಚಿಕ್ಕಪ್ಪ ಮಲ್ಲೇಶಪ್ಪನಿಗೆ ಕೊಟ್ಟು, ಆತನ ಜನತಾ ನಿವೇಶನದಲ್ಲಿ ನಮ್ಮ ಚಿಕ್ಕಪ್ಪರಾದ ಮಲ್ಲೇಶಪ್ಪ ಮತ್ತು ಬಸಪ್ಪನ ಭಾಗವನ್ನು ಪಡೆದುಕೊಂಡಿದ್ದೇವೆ. ಅದರ ಬಗ್ಗೆ ದಾಖಲೆ ಇರುವುದಿಲ್ಲ.

**1 ನೇ ಪ್ರತಿವಾದಿಯ ಪರ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.